ಅ) ಧಾರವಾಡ ಜಿಲ್ಲಾ ಶಸ್ತ್ರಚಿಕಿತ್ಸಾ ದವಾಖಾನೆ ಪ್ರಾರಂಭವಾದುದ್ದು ಯಾವಾಗ, ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಎಷ್ಟು ಹಾಸಿಗೆಗಳನ್ನು ಒದಗಿಸಲಾಗಿದೆ?

ಆ) ರಾಜ್ಯದಲ್ಲಿ ಬೆಂಗಳೂರು ನಂತರ ಶೈಕ್ಷಣಿಕ ನಗರ ಧಾರವಾಡ ಎಂಬುದು ನಿಜವಲ್ಲವೇ?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಾಂಬೆ, ಕರ್ನಾಟಕ ರಾಜ್ಯಗಳ ರಿ-ಆರ್ಗನೈಜೇಷನ್ ಕಾಯಿದೆ 1956 ರಂತೆ 1-11-1956 ರಲ್ಲಿ ಜಿಲ್ಲಾ ಆಸ್ಪತ್ರೆ, ಧಾರವಾಡ, ಕರ್ನಾಟಕ ರಾಜ್ಯಕ್ಕೆ ವರ್ಗಾಯಿಸ ಲಾಗಿಯಿತ್ತು. ಸದರಿ ಆಸ್ಪತ್ರೆಯು 170 ಹಾಸಿಗೆಗಳ ಸೌಲಭ್ಯ ಹೊಂದಿರುತ್ತದೆ.

ಆ) ಹೌದು.

ಶ್ರೀ ಚಂದ್ರ ಕಾಂತ ಬೆಲ್ಲದ್ :- ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರವನ್ನು ಬಿಟ್ಟರೆ ಎರಡನೆಯ ದೊಡ್ಡ ನಗರ ಧಾರವಾಡವಾಗಿದೆ. ಮತ್ತು ಅಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಅಲ್ಲಿನ ಜಿಲ್ಲಾ ಆಸ್ಪತ್ರೆಗೆ ಈಗಾಗಲೆ ನೂರಾಹತ್ತು ವರ್ಷ ಗಳಾಗಿದೆ. ಆದರೆ ಅಲ್ಲಿ 170 ಹಾಸಿಗೆಗಳ ಸೌಲಭ್ಯ ಮಾತ್ರವಿದೆ. ಆದರೆ ಮೈಸೂರು, ಮಂಗಳೂರು, ಮುಂತಾದ ನಗರಗಳಲ್ಲಿ ಸಾಧಾರಣವಾಗಿ ಐದುನೂರು ಹಾಸಿಗೆಗಳ ಸೌಲಭ್ಯವಿದೆ. ಆದರೆ ನಮ್ಮಲ್ಲಿ ಕೇವಲ 170 ಹಾಸಿಗೆಗಳು ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿಯ ಐದುನೂರು ಹಾಸಿಗೆಗಳಿಗೆ ಹೆಚ್ಚು ಮಾಡುತ್ತೀರಾ?

ಡಾ. ಹೆಚ್. ಸಿ. ಮಹದೇವಪ್ಪ :- ಅಧ್ಯಕ್ಷರೆ, 1956 ನೇ ಇಸವಿಯಲ್ಲಿ ಬಾಂಬೆ ಕರ್ನಾಟಕ ವಿಭಜನೆಯಾದಾಗ ಧಾರವಾಡ ಆಸ್ಪತ್ರೆಯು 170 ಹಾಸಿಗೆಯ ಆಸ್ಪತ್ರೆಯಾಗಿ ಪರಿವರ್ತನೆಗೊಂಡಿದೆ, ವಿಶ್ವಬ್ಯಾಂಕ್‌ನ ಯೋಜನೆಯ ಅಡಿಯಲ್ಲಿ ಈ ಆಸ್ಪತ್ರೆಯನ್ನು 250 ಹಾಸಿಗೆಗಳುಳ್ಳ ಆಸ್ಪತ್ರೆಯಾಗಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇದು ರಾಜ್ಯದ ಎರಡನೆಯ ದೊಡ್ಡ ಮಹಾ ನಗರವೆಂಬುದನ್ನು ಕೇಳಿದ್ದೇನೆ, ಆದರೆ ಶಿಕ್ಷಣ ಕ್ಷೇತ್ರದಲ್ಲಿ ಮಹಾನಗರವೆಂಬುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಶಿಕ್ಷಣ ಇಲಾಖೆಯಿಂದ ತಾವು ಕೇಳಿ ಪಡೆದುಕೊಳ್ಳಬೇಕೆಂದು ತಮಗೆ ತಿಳಿಯಬಯಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ :- ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಕೃಷಿ ವಿಶ್ವವಿದ್ಯಾನಿಲಯ ಇದೆ. ಅನೇಕ ವರ್ಷಗಳಿಂದ ಈ ಎರಡೂ ವಿಶ್ವವಿದ್ಯಾನಿಲಯಗಳಿವೆ. ಶಿಕ್ಷಣದಲ್ಲಿ ಮೊದಲನೆಯ ಕೇಂದ್ರ ಎಂಬ ಬಗ್ಗೆ ಮಾಹಿತಿ ತರಿಸಿಕೊಳ್ಳುವುದಾಗಿ ಹೇಳಿದ್ದಾರೆ, ದಯವಿಟ್ಟು ಆ ಮಾಹಿತಿ ತರಿಸಿಕೊಳ್ಳಬೇಕು. ನೂರಾಹತ್ತು ವರ್ಷಗಳು ಸಂದಿರುವ ಈ ಆಸ್ಪತ್ರೆಗೆ ಶತಮಾನೋತ್ಸವವನ್ನು ಮಾಡಿ ಅಲ್ಲಿ 500 ಹಾಸಿಗೆಗಳಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕು.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನ ಯೋಜನೆಯ ಅಡಿಯಲ್ಲಿ 170 ರಿಂದ 250 ಹಾಸಿಗೆಗಳುಳ್ಳ ಆಸ್ಪತ್ರೆಯಾಗಿ ಪರಿವರ್ತಿಸ ಲಾಗುವುದೆಂದು ಈಗಾಗಲೇ ಹೇಳಿದ್ದೇನೆ. ಜೊತೆಗೆ ಹುಬ್ಬಳ್ಳಿಯಲ್ಲಿ ಟೀಚಿಂಗ್ ಸಂಸ್ಥೆ ಯೊಂದಿದೆ. ಆದನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ 250 ಹಾಸಿಗೆ ಗಳುಳ್ಳ ಆಸ್ಪತ್ರೆಯನ್ನಾಗಿ ಮಾಡಿದರೆ ಸಾಕು ಎಂದು ನನಗನ್ನಿಸುತ್ತದೆ. ಇನ್ನೂರು, ಮುನ್ನೂರು, ಐದುನೂರು ಹಾಸಿಗೆಗಳ ಸೌಲಭ್ಯವನ್ನು ಒದಗಿಸಿಕೊಟ್ಟುಬಿಟ್ಟರೆ ಭಾರಿ ಗುಣಾತ್ಮಕವಾದ ಬದಲಾವಣೆಯಾಗುತ್ತದೆಂದು ತಿಳಿದುಕೊಳ್ಳುವುದು ತಪ್ಪು.

ಶ್ರೀ ಚಂದ್ರಕಾಂತ್ ಬೆಲ್ಲದ್ :- ಜನಸಂಖ್ಯೆ ಗಾತ್ರದಲ್ಲೂ ಸಹಿತ ಮೈಸೂರಿ ಗಿಂತಲೂ ನಮ್ಮದು ದೊಡ್ಡ ನಗರವಾಗಿದೆ. ಮೈಸೂರು ಮತ್ತು ಮಂಗಳೂರು ನಗರದಲ್ಲಿ ಇರುವಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವ ರೀತಿಯ ಸೌಲಭ್ಯಗಳಿವೆ, ಅವುಗಳನ್ನು ಇಲ್ಲಿನ ಆಸ್ಪತ್ರೆಯಲ್ಲೂ ಕೂಡ ನೀವು ಒದಗಿಸಬೇಕಲ್ಲವೇ? ಜನಸಂಖ್ಯೆ ಗಾತ್ರದ ಮೇಲೆ ಮೈಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಬೆಡ್‌ಗಳಿವೆ? ಮಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಎಷ್ಟು ಬೆಡ್‌ಗಳಿವೆಯೋ, ಆ ಗಾತ್ರಕ್ಕೆ ಸರಿಸಮಾನವಾಗುವಂತೆ ಇಲ್ಲಿಯ ಆಸ್ಪತ್ರೆಯ ಬೆಡ್‌ಗಳ ಸಂಖ್ಯೆಯನ್ನೂ ಕೂಡ ನೀವು ಹೆಚ್ಚಿಸಬೇಕಲ್ಲವೇ? ಇಲ್ಲಿಗೆ ಹುಬ್ಬಳ್ಳಿ 30 ಕಿ. ಮೀ. ದೂರದಲ್ಲಿದೆ. ದಯವಿಟ್ಟು ಇದನ್ನು 500 ಹಾಸಿಗೆಗಳಿಗೆ ವಿಸ್ತರಿಸಬೇಕು. ಇವತ್ತಿನವರೆಗೂ ಅಲ್ಲಿ ವಿಸಿಟರ್ಸ್ ಬೋರ್ಡ್ ಮಾಡಿಲ್ಲ. 500 ಹಾಸಿಗೆಗಳ ಆಸ್ಪತ್ರೆಯ ನ್ನಾಗಿ ಇದನ್ನು ಯಾವಾಗ ಮಾಡುತ್ತೀರಿ?

ಡಾ. ಹೆಚ್. ಸಿ. ಮಹದೇವಪ್ಪ :- ಆಸ್ಪತ್ರೆಯಲ್ಲಿ ಏನು 170 ಹಾಸಿಗೆಗಳಿವೆ ಅದನ್ನು 250 ಕ್ಕೆ ಹೆಚ್ಚಿಸಲು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಸುಮಾರು 790 ಹಾಸಿಗೆಗಳುಳ್ಳ ಆಸ್ಪತ್ರೆ ಈಗ ಹುಬ್ಬಳ್ಳಿಯಲ್ಲಿ ಇದೆ. ಎರಡೂ ಸೇರಿಸಿದರೆ ಎರಡು ನಗರದಿಂದ ಹೆಚ್ಚು ಕಡಿಮೆ ಸುಮಾರು 1000 ಹಾಸಿಗೆಗಳಾಯಿತು. ಅಷ್ಟು ಹಾಸಿಗೆಗಳು ಸಾಕು ಅನಿಸುತ್ತದೆ. ದಯಮಾಡಿ ತಾವು ಸಹಕರಿಸಬೇಕು. ನಾನು ನಿಮಗೆ ಸುಮ್ಮನೆ ಹಾಸಿಗೆಗಳ ಸಂಖ್ಯೆಯನ್ನು ಏರಿಸುತ್ತೇನೆ ಎಂದು ಭರವಸೆ ಕೊಡಿಲಿಕ್ಕೆ ಸಿದ್ಧನಿಲ್ಲ.

ಶ್ರೀ ಚಂದ್ರಕಾಂತ ಬೆಲ್ಲದ್ :- ದಯವಿಟ್ಟು ಜನಸಂಖ್ಯೆಗಾತ್ರದ ಆಧಾರದ ಮೇಲೆ ಅಲ್ಲಿ 500 ಹಾಸಿಗೆಗಳನ್ನು ಮಾಡುವ ಅವಶ್ಯಕತೆ ಇದೆ, ಅದನ್ನು ನೀವು ಮಾಡಿ. ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಮತ್ತೊಮ್ಮೆ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಿಷಯ :- ಮಾಲೂರಿನಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 260 (1925)

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?